**ಸೇತುಬಂಧ – ಸಲಹಾತ್ಮಕ ಚಟುವಟಿಕೆಗಳು**

**ತರಗತಿ : 6** **ವಿಷಯ : ಸಮಾಜ ವಿಜ್ಞಾನ** **ಅವಧಿ : 16**

ಈ ಸಲ 2023-24 ನೇ ಸಾಲಿನಲ್ಲಿ ಹದಿನೈದು ದಿನಗಳ ಸೇತುಬಂಧ ನಮ್ಮ ತರಗತಿಯ ಮಕ್ಕಳಿಗೆ ನಡೆಸಬೇಕಾಗಿರುತ್ತದೆ. ಹಾಗೆ ನಡೆಸುವಾಗ ಇಲ್ಲಿ ಕೆಲವು ಅಂಶಗಳನ್ನು ತಾವು ಗಮನಿಸಲು ಕೋರಿದೆ.

- ಇಲ್ಲಿ ನೀಡಿದ ಕಲಿಕಾ ಫಲಗಳು, ಸಮಾಜ ವಿಜ್ಞಾನ ವಿಷಯದ ಮೂಲಭೂತ ಕಲಿಕಾ ಫಲ ಮತ್ತು ಹಿಂದಿನ ತರಗತಿಯ ಅಂತರಗಳನ್ನು ಗಮನದಲ್ಲಿರಿಸಿ ನೀಡಲಾಗಿದೆ. ಮತ್ತೊಂದು ಆಯಾಮವಾದ ವಿದ್ಯಾರ್ಥಿಗಳ ಓದು ಮತ್ತು ಬರೆಹದ ಆಯಾಮ ಬಹಳ ಮುಖ್ಯ.ಒಂದು ವೇಳೆ ಓದಲು, ಬರೆಯಲು ಬರುತ್ತಿಲ್ಲವೆಂದರೆ ಅಂತಹಾ ವಿದ್ಯಾರ್ಥಿಗಳಿಗೆ ನಿಮ್ಮ ಸ್ವಾಯತ್ತತೆಯಿಂದ ಶಾಲಾ ಪರಿಸರಕ್ಕೆ ಅನುಗುಣವಾದ ಚಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
- ಇಲ್ಲಿ ಕಲಿಕಾ ಫಲಗಳಿಗೆ ವಿವಿಧ ಚಟುವಟಿಕೆಗಳನ್ನು ನೀಡಲಾಗಿದೆ. ನಿಗಧಿತ ಅವಧಿಗೆ ನಿಮ್ಮ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
- ಓದು ಬರೆಹ ಬರುವ ಮಕ್ಕಳಿಗೆ ಆರಂಭದಲ್ಲಿ ಟಿಪ್ಪಣಿ ಬರೆಯುವ, ಮಾಹಿತಿ ಸಂಗ್ರಹಿಸುವ ಕೌಶಲಗಳಿಗೆ ಮಾರ್ಗದರ್ಶನ ನೀಡಿರಿ.

ತಮ್ಮ ಈ ಸಾಲಿನ ಸೇತುಬಂಧ ಚೆಂದಾಗಲಿ… ಶುಭಾಶಯಗಳು

| **ಸಂಖ್ಯೆ** | **ಅಪೇಕ್ಷಿತ ಕಲಿಕಾಫಲಗಳು** | **ಕಲಿಕಾಂಶಗಳು** | **ಸಲಹಾತ್ಮಕ ಚಟುವಟಿಕೆಗಳು** | **ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು** |
|---|---|---|---|---|
| 1 | ವಿವಿಧ ರೀತಿಯ ಕುಟುಂಬಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸರಳ ವಂಶವೃಕ್ಷದ ಮೂಲಕ ಹೋಲಿಸುವರು. | • ವಂಶವೃಕ್ಷ ರಚನೆ<br>• ಕುಟುಂಬದ ವಿಧಗಳಾದ -ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಲಕ್ಷಣಗಳು<br>• ಕುಟುಂಬದ ಮಹತ್ವ | 1.1) ಪ್ರಶ್ನಾವಳಿ –ಕೋಷ್ಟಕ | 1.1) ಪ್ರಶ್ನಾವಳಿ ರಚಿಸಿಕೊಂಡು ಮಗುವಿಗೆ ತನ್ನ ಕುಟುಂಬದ ಪರಿಚಯ ಮಾಡಿಕೊಡಲು ತಿಳಿಸಿ.<br>- ನಿನ್ನ ಕುಟುಂಬದಲ್ಲಿ ಎಷ್ಟು ಜನರಿದ್ದಾರೆ?<br>- ನಿನ್ನ ಕುಟುಂಬದ ಸದಸ್ಯರು ಮತ್ತು ನಿನ್ನೊಂದಿಗೆ ಅವರ ಸಂಬಂಧ ಏನೆಂಬುದನ್ನು ತಿಳಿಸು. |

| ಕ್ರ.ಸಂ | **ಕುಟುಂಬದ ಸದಸ್ಯರ ಹೆಸರು** | **ನಿನ್ನೊಂದಿಗಿನ ಅವರ ಸಂಬಂಧ** |
|---|---|---|
| | | |

<table>
<tr><td></td><td></td><td></td><td>1.2) ವಂಶವೃಕ್ಷ ರಚನೆ</td><td>1.2) ಪ್ರತಿ ವಿಧ್ಯಾರ್ಥಿಗೂ ತನ್ನ ಕುಟುಂಬದ ವಂಶವೃಕ್ಷ ಬರೆಯಲು ಸೂಚಿಸಿ.<br>(ಸೂಚನೆ: ವಂಶವೃಕ್ಷದಲ್ಲಿ ಬಳಸುವ ಸಂಕೇತಗಳನ್ನು ಶಿಕ್ಷಕರು ಪರಿಚಯಿಸಿರಬೇಕು. ಪರಿಸರ ಅಧ್ಯಯನ 4ನೇ ತರಗತಿಯ 16ನೇ ಪಾಠ,5ನೇ ತರಗತಿಯ 2ನೇ ಪಾಠದಲ್ಲಿ ಪರಿಚಯಿಸಲಾಗಿದೆ)<br></td></tr>
<tr><td></td><td></td><td></td><td>1.3) ನಾಟಕಾಭಿನಯ</td><td>1.3) ತರಗತಿಯ ಮಕ್ಕಳನ್ನೇ ಬಳಸಿಕೊಂಡು ನಾಟಕಾಭಿನಯ ಮಾಡಿಸುವ ಮೂಲಕ ವಿಭಕ್ತ ಮತ್ತು ಅವಿಭಕ್ತ ಕಟುಂಬಗಳ ಪರಿಕಲ್ಪನೆ ಮೂಡಿಸಿ. ಅವುಗಳ ಲಕ್ಷಣಗಳನ್ನು ಅರ್ಥೈಸಿ.</td></tr>
<tr><td></td><td></td><td></td><td>1.4) ಸಮೀಕ್ಷೆ</td><td>1.4) ವಿಧ್ಯಾರ್ಥಿಗಳಿಗೆ ತಮ್ಮ ನೆರೆಹೊರೆಯ 05 ಮನೆಗಳಿಗೆ ಭೇಟಿ ನೀಡಿ ಈ ಕೆಳಗಿನ ನಮೂನೆಯಲ್ಲಿರುವಂತೆ ಮಾಹಿತಿ ಸಂಗ್ರಹಿಸಿಕೊಂಡು ಬರಲು ಸೂಚಿಸಿ.
<table>
<tr><td>ಸಂಖ್ಯೆ</td><td>ಭೇಟಿ ನೀಡಿದ ಮನೆಯ ಮುಖ್ಯಸ್ಥರ ಹೆಸರು</td><td>ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ</td><td>ಮುಖ್ಯಸ್ಥರೊಂದಿಗೆ ಸದಸ್ಯರು ಹೊಂದಿರುವ ಸಂಬಂಧ</td></tr>
<tr><td></td><td></td><td></td><td></td></tr>
</table></td></tr>
<tr><td></td><td></td><td></td><td>1.5) ಚರ್ಚೆ</td><td>1.5) ಪ್ರಸ್ತುತ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಲು ಕಾರಣಗಳು ಏನೆಂಬುದನ್ನು ಚರ್ಚೆಯ ಮೂಲಕ  ಅರ್ಥೈಸಿ.<br>1.6) ಕುಟುಂಬದಿಂದ ನಾವು ಕಲಿಯಬಹುದಾದ ಗುಣಗಳನ್ನು (ಉದಾ:ಪ್ರೀತಿ, ಸಹಕಾರ,ಸಹಬಾಳ್ವೆ,ಹೊಂದಾಣಿಕೆ ಇತ್ಯಾದಿ) ಚೀಟಿಗಳಲ್ಲಿ ಬರೆದು ತರಗತಿ</td></tr>
</table>

| | | | | |
|---|---|---|---|---|
| | | | 1.6) ಟ್ರಜರ್ ಹಂಟ್ | ಕೊಠಡಿ / ಶಾಲಾ ಪರಿಸರದಲ್ಲಿ ಅಡಗಿಸಿಡಿ. ಮಕ್ಕಳಿಗೆ ಅವುಗಳನ್ನು ಹುಡುಕಿ ತರುವ ಟಾಸ್ಕ್ ನೀಡಿ. ನಂತರ ಈ ಎಲ್ಲ ಅಂಶಗಳನ್ನು ಕುರಿತು ಚರ್ಚಿಸಿ ಅರ್ಥೈಸಿ.<br>**ಒಟ್ಟು ಅವಧಿಗಳು -02 +1** |
| 02 | 2. ಇತಿಹಾಸದ ವಿಭಿನ್ನ ಆಧಾರಗಳನ್ನು ಗುರುತಿಸುತ್ತಾರೆ. | 2.1.ಇತಿಹಾಸ ಪರಿಕಲ್ಪನೆ ಮೂಡಿಸುವುದು.<br>2.2.ಇತಿಹಾಸದ ರಚನೆಯ ಆಧಾರಗಳನ್ನು ವಿಂಗಡಿಸುವುದು.<br>2.3.ಇತಿಹಾಸದ ರಚನೆಯಲ್ಲಿ ಆಧಾರಗಳ ಪಾತ್ರವನ್ನು ವಿವರಿಸುವರು. | **2.1.ಪಟ್ಟಿ ಮಾಡುವುದು:**<br>ಕೊಟ್ಟಿರುವ ಅಂಶಗಳನ್ನು ಸಾಹಿತ್ಯ ಮತ್ತು ಪುರಾತತ್ವ [illegible]ಳನ್ನು ಪಟ್ಟಿ ಮಾಡಿರಿ.<br><br><br><br><br>**2.2. ಆಲ್ಬಂ ತಯಾರಿಕೆ:**<br>*ಸ್ಮಾರಕಗಳು ನಾಣ್ಯಗಳು ಶಾಸನಗಳು ಐತಿಹಾಸಿಕ ಸ್ಥಳಗಳು ಲಾವಣಿಗಳು ಜಾನಪದ ಕಥೆಗಳ | 2.1.ಕೊಟ್ಟಿರುವ ಅಂಶಗಳನ್ನು ಸಾಹಿತ್ಯ ಮತ್ತು ಪುರಾತತ್ವ ಆಧಾರಗಳಾಗಿ ಗುರುತಿಸಲು ಸಹಾಯ ಮಾಡಿರಿ.<br>1 ಲಾವಣಿಗಳು 2 ನಾಣ್ಯಗಳು<br>3 ಸ್ಮಾರಕಗಳು 4 ಐತಿಹ್ಯಗಳು<br>[illegible] ಸಾಹಿತ್ಯ 6 ಶಾಸನಗಳು<br>7 ವಿದೇಶಿ ಸಾಹಿತ್ಯ 8 ಇತರ ಅವಶೇಷಗಳು<br>9 ಜಾನಪದ ಕಥೆಗಳು<br>[illegible]ಾರಕಗಳು, ನಾಣ್ಯಗಳು,ಶಾಸನಗಳು, ಐತಿಹಾಸಿಕ ಸ್ಥಳಗಳು, ಲಾವಣಿಗಳು ಮತ್ತು ಜಾನಪದ ಕಥೆಗಳ ಚಿತ್ರಗಳನ್ನುಸಂಗ್ರಹಿಸಲು ವೃತ್ತ ಪ[illegible], ಮ್ಯಾಗಜಿನಗಳು, ಅಂತರ್ಜಾಲ ಮುಂತಾದವುಗಳ ಬಳಕೆ ಮೂಲಕ ಸಹಕರಿಸಿ.<br>2.3 ಸ್ಮಾರಕಗಳು, ನಾಣ್ಯಗಳು, ಲಾವಣಿಗಳು, ದೇಶಿ ಸಾಹಿತ್ಯ ವಿದೇಶಿ, [illegible] ,ಶಾಸನಗಳು, ಜಾನಪದ ಕಥೆಗಳನ್ನು ಗುಂಪುಗಳಲ್ಲಿ ಹಂಚಿ ಗುಂಪು ಚರ್ಚಿಸಲು ಪ್ರೇರೇಪಿಸಿ.<br>2.4.ನಿಮ್ಮ ಊರಿನ ಹೆಸರು ಹೇಗೆ ಬಂತು? ಹಾಗೂ ನಿಮ್ಮ ಊರಿನ ಸಾಹಿತ್ಯ ಮತ್ತು ಪುರತತ್ವ ಆಧಾರಗಳಿಗೆ ಸಂಬಂಧಿಸಿದ ಕಥೆಗಳನ್ನು ಸ್ನೇಹಿತರಿಂದ ಹಿರಿಯರಿಂದ ತಿಳಿಯುವಂತೆ ಅನುಕೂಲಿಸಿ. |

| | | | | |
|---|---|---|---|---|
| | | | ಚಿತ್ರಗಳನ್ನು ಸಂಗ್ರಹಿಸಿ, ಆಲ್ಬಂ ತಯಾರಿಸಿ.<br>**2.3.ಗುಂಪುಚರ್ಚೆ:** ಆಧಾರಗಳು ಇತಿಹಾಸ ರಚನೆ ಮಾಡಲು ಹೇಗೆ ಸಹಾಯಕವಾಗಿವೆ ಎಂಬುದರ ಬಗ್ಗೆ ಚರ್ಚಿಸಿ<br>**2.4.ಕಥೆಹೇಳಿಸುವುದು:** ನಿಮ್ಮ ಊರಿನ ಇತಿಹಾಸವನ್ನು ಕಥೆಯ ರೂಪದಲ್ಲಿ ವ್ಯಕ್ತ ಪಡಿಸಿ. ಆ ಹೆಸರು ಹೇಗೆ ಬಂತು ತಿಳಿಯಿರಿ.<br>**2.5.ಸ್ಥಳ ಭೇಟಿ:-** ನಿಮ್ಮ ಊರಿನಲ್ಲಿರುವ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿರಿ. | 2.5. ಸಮೀಪದ ಪ್ರಾಚೀನ ದೇವಸ್ಥಾನ, ಸ್ಮಾರಕ, ಐತಿಹಾಸಿಕ ಸ್ಥಳಗಳಿಗೆ ಪೋಷಕರ ಸಹಾಯದಿಂದ ಹೋಗಿ, ಅಲ್ಲಿನ ಇತಿಹಾಸ ತಿಳಿಯಲು ಪ್ರಯತ್ನಿಸಿ. ಅಲ್ಲಿರುವ ಆಧಾರಗಳನ್ನು ಪಟ್ಟಿ ಮಾಡಿ, ವಿಂಗಡಿಸಿ ಬರೆಯಲು ಸಹಕರಿಸಿ. **(ಅವಧಿಗಳು-02)** |
| 03 | ಹವಾಮಾನ ಮತ್ತು ಭೂಪ್ರದೇಶ ಮತ್ತು ಸಂಪನ್ಮೂಲಗಳ ನಡುವಿನ ಸಂಬಂಧವನ್ನು ಗ್ರಹಿಸುವರು. (ಆಹಾರ, ನೀರು, ಆವಾಸ, ಮತ್ತು ಜೀವನೋಪಾಯ). | • ಬೇಸಿಗೆ ಕಾಲ ಮಳೆಗಾಲ ಚಳಿಗಾಲ ಜೀವನದಲ್ಲಿ ಉಂಟುಮಾಡುವ ಬದಲಾವಣೆಗಳು.<br>• ಉಡುಗೆ-ತೊಡುಗೆ ಬೆಳೆಗಳು ಹಾಗೂ ಆಹಾರ ಸೇವನೆಯ | 3.1) ಆಟ (ಡಮ್ ಶರಾಡ್ಸ್) | 3.1) **ಸೂಚನೆಗಳು :** 1- ಫ್ಲ್ಯಾಶ ಕಾರ್ಡ್ಗಳ (FLASH CARDS) ಮೇಲೆ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಎಂದು ಬರೆಯಿರಿ.<br>2- ವಿಧ್ಯಾರ್ಥಿಗಳನ್ನು ಒಬ್ಬೊಬ್ಬರಂತೆ ಕರೆದು ಒಂದು ಕಾರ್ಡ್ ತೋರಿಸಿ. (ಇತರರಿಗೆ ತೋರದಂತೆ)<br>3-ತಮಗೆ ತೋರಿಸಲಾದ ಕಾರ್ಡಿನಲ್ಲಿನ ವಿಷಯದ ಕುರಿತು ಮಕ್ಕಳು ಮೂಕಾಭಿನಯ ಮಾಡಿ ತೋರಿಸುವಂತೆ ಸೂಚಿಸಿ. |

| | | | | |
|---|---|---|---|---|
| | ❖ ಹವಾಮಾನದಲ್ಲಿನ ವಿದ್ಯಮಾನಗಳನ್ನು ತಿಳಿಯುವುದು ಮತ್ತು ಒಂದು ದಿನದಲ್ಲಿ ನಡೆಯುವ ಬದಲಾವಣೆಗಳನ್ನು ವಿವರಿಸುವುದು.<br>ಉದಾಹರಣೆ-ಮೋಡ ಮಳೆ ಬಿಸಿಲು ಗಾಳಿ ಇತ್ಯಾದಿ. | ಮೇಲೆ ಪ್ರಭಾವ.<br>• ನಿತ್ಯ ಜೀವನದಲ್ಲಿ ನಾವು ಗುರುತಿಸಬೇಕಾದ ಹವಾಮಾನದ ಘಟಕಾಂಶಗಳಾದ ಮಳೆ,ಮೋಡ, ಬಿಸಿಲು, ಗಾಳಿ ಇತ್ಯಾದಿ. | 3.2) ಆಟ- **ಚಿತ್ರ ನೋಡು- ಉತ್ತರ ಹೇಳು**<br>3.3) ಕೊಲಾಜ್ ತಯಾರಿಸುವುದು.<br>3.4) ವಿಡಿಯೋ ಕ್ಲಿಪಿಂಗ್ / ಚಿತ್ರ ಪ್ರದರ್ಶನ<br>3.5) ಪ್ರದರ್ಶನ<br>3.6) ಹವಾಮಾನ ನಕ್ಷೆ ಬಳಕೆ | **4-**ಇತರೆ ಮಕ್ಕಳು ಸರಿ ಉತ್ತರವನ್ನು ಊಹಿಸಿ ಹೇಳಲು ತಿಳಿಸಿ.<br>**ಉದಾ:** 'ಮಳೆಗಾಲ' ಎಂಬ ಕಾರ್ಡ್ ಸಿಕ್ಕಿರುವ ವಿಧ್ಯಾರ್ಥಿ ಛತ್ರಿ ಹಿಡಿದು ನಡೆದುಕೊಂಡು ಹೋಗುವಂತೆ ಅಭಿನಯಿಸುವುದು.<br>3.2) ವಿವಿಧ ಋತುಮಾನಗಳಲ್ಲಿನ ಪರಿಸರ, ಜೀವನ ಕ್ರಮ, ಆಹಾರ, ಉಡುಪುಗಳ ಚಿತ್ರ ತೋರಿಸಿ. ಅವು ಯಾವ ಕಾಲಕ್ಕೆ ಸೇರಿವೆ ಎಂದು ಉತ್ತರ ಹೇಳಲು ಸೂಚಿಸಿ.<br>(ಉದಾ: ಸ್ವೆಟರ್ – ಟೋಪಿ ಚಿತ್ರ ನೋಡಿ ಮಕ್ಕಳು ಇದು ಚಳಿಗಾಲಕ್ಕೆ ಸಂಬಂಧಿಸಿದ್ದು ಎಂದು ಉತ್ತರಿಸುವುದು)<br>3.3) ವಿವಿಧ ಋತುಮಾನಗಳಲ್ಲಿ ಬಳಸುವ ಉಡುಪು,ಸೇವಿಸುವ ಆಹಾರ ಇವುಗಳನ್ನು ತೋರಿಸುವ ಕೊಲಾಜ್ ತಯಾರಿಸಲು ಮಾರ್ಗದರ್ಶನ ನೀಡಿ.<br><br><br>3.4) ಋತುಮಾನಗಳು,ವಿವಿಧ ಭೂಪ್ರದೇಶಗಳು ಅಲ್ಲಿನ ಹವಾಮಾನ ತೋರಿಸುವ ಚಿತ್ರ ಪಟ / ವಿಡಿಯೋ ಕ್ಲಿಪಿಂಗ್ ಪ್ರದರ್ಶಿಸಿ.<br>3.6) ಕರ್ನಾಟಕದಲ್ಲಿನ ವಿವಿಧ ಭೂಭಾಗ / ಜಿಲ್ಲೆಗಳಲ್ಲಿ ಬಳಸುವ ಆಹಾರ ಧಾನ್ಯಗಳು / ಆಹಾರ ಪದ್ಧತಿಯನ್ನು ಪಟ್ಟಿ ಮಾಡಿಸಿ.<br>ಉದಾ : ಉತ್ತರ ಕರ್ನಾಟಕದಲ್ಲಿ ಜೋಳ, ಮಲೆನಾಡು ಅಕ್ಕಿಯ ಬಳಕೆ, ಕರಾವಳಿಯಲ್ಲಿ ಕುಚ್ಚಲ ಅಕ್ಕಿ . ಹೀಗೆ ಆಹಾರ ವೈವಿಧ್ಯತೆಯನ್ನು ಪರಿಚಯಿಸಿ. |

| | | | | |
|---|---|---|---|---|
| | | | | 3.7) ಹವಾಮಾನ ನಕ್ಷೆ ಬಳಸಿಕೊಂಡು ಮೋಡ,ಮಳೆ,ಬಿಸಿಲು,ಗಾಳಿ ಗುರುತಿಸಿ ತಿಳಿಯಲು ಅನುಕೂಲಿಸಿ. **ಒಟ್ಟು ಅವಧಿಗಳು - 03** |
| 04 | ವಿವಿಧ ರೀತಿಯ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಅವುಗಳ ಸಂರಕ್ಷಣೆಯ ವಿಧಾನಗಳನ್ನು ವಿವರಿಸುವರು.<br><br>❖ ಸಂಪನ್ಮೂಲಗಳನ್ನು ( ನೀರು, ಆಹಾರ, ಇಂಧನ, ಅರಣ್ಯ ) ಉಳಿಸಲು ಸೂಕ್ತ ಮಾರ್ಗಗಳನ್ನು ಸೂಚಿಸುವರು ಹಾಗೂ ನೈರ್ಮಲ್ಯವನ್ನು ಅನುಸರಿಸಿ ತ್ಯಾಜ್ಯಗಳ ನಿರ್ವಹಣೆ ಮಾಡುವರು. | • ನೈಸರ್ಗಿಕ ಸಂಪನ್ಮೂಲಗಳ ಅವಶ್ಯಕತೆ.<br>• ನೈಸರ್ಗಿಕ ಸಂಪನ್ಮೂಲಗಳ ವಿಧಗಳು.<br>• ನೈಸರ್ಗಿಕ ಸಂಪನ್ಮೂಲಗಳ ಮಹತ್ವ.<br>• ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳು<br>• ಸಂಪನ್ಮೂಲಗಳ ಮಿತ ಬಳಕೆ ಮತ್ತು ಸಂರಕ್ಷಣೆಯ ಅಗತ್ಯತೆ. | 4.1) ಒಗಟು ಬಿಡಿಸುವುದು<br>4.2) ಚಿತ್ರಪಟ ಪ್ರದರ್ಶನ<br>4.3) ಟ್ರೆಜರ್ ಹಂಟ್<br>4.4) ಕೋಷ್ಟಕ ತಯಾರಿ<br>4.5) ಚಿತ್ರಕಲೆ<br>4.6) ಪಾತ್ರ ಪರಿಚಯ<br>4.7) ಕಲ್ಪನಾಲೋಕ- ಚರ್ಚೆ<br>4.8) ಯೋಜನೆ | 4.1) ಚೀಟಿಗಳಲ್ಲಿ ಸಂಪನ್ಮೂಲಗಳಿಗೆ ಸಂಬಂಧಿತ ಒಗಟು ಬರೆದು ವಿಧ್ಯಾರ್ಥಿಗಳಿಗೆ ಕೊಟ್ಟು ಉತ್ತರ ಹೇಳಿಸಿ. (5ನೇ ತರಗತಿ ಪ.ಅ ಪುಟ ಸಂ 60)<br>4.2) ನೈಸರ್ಗಿಕ ಸಂಪನ್ಮೂಲಗಳ ಚಿತ್ರಪಟ ತೋರಿಸಿ ಪರಿಚಯಿಸಿ.<br>4.3) ವಿವಿಧ ಸಂಪನ್ಮೂಲಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಅಡಗಿಸಿಡಿ. ಮಕ್ಕಳಿಗೆ ಅದನ್ನು ಹುಡುಕಿ ತರುವ ಟಾಸ್ಕ್ ನೀಡಿ. (ಸುಳಿವುಗಳನ್ನು ನೀಡಿ)<br>4.4) ಮಕ್ಕಳು ತಂದ ಚೀಟಿಗಳನ್ನು ಗೋಡೆಯ ಮೇಲೆ ತಯಾರಿಸಿದ ಕೋಷ್ಟಕದಲ್ಲಿ ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳಾಗಿ ವಿಂಗಡಿಸಿ ಅಂಟಿಸಲು ಸೂಚಿಸಿ. ( ಶಿಕ್ಷಕರ ಮಾರ್ಗದರ್ಶನ)<br>4.5) **'ಅರಣ್ಯ ಉಳಿಸಿ',ಜಲ ಸಂರಕ್ಷಣೆ'** ಮುಂತಾದ ಸಂದೇಶ ನೀಡುವ ಚಿತ್ರ ಬರೆದುಕೊಂಡು ಬರಲು ಸೂಚಿಸಿ / ಸ್ಪರ್ಧೆ ಏರ್ಪಡಿಸಿ.<br>4.6) ಸಾಲು ಮರದ ತಿಮ್ಮಕ್ಕ ಮೊದಲಾದ ಪರಿಸರ ಪ್ರೇಮಿಗಳ ಪರಿಚಯ<br>4.7) ಹಿಂದೆ ಸಂಪನ್ಮೂಲ ಎಂದು ಪರಿಗಣಿಸದವು ಇಂದು ಅಮೂಲ್ಯ ಸಂಪನ್ಮೂಲವಾಗಿವೆ (ಉದಾ: ನೈಸರ್ಗಿಕ ಅನಿಲ) ಇದಕ್ಕೆ ಕಾರಣವನ್ನು ಚರ್ಚಿಸಿ. (5ನೇ ತರಗತಿ ಪರಿಸರ ಪುಟ ಸಂಖ್ಯೆ:75 –**ನಿನಗಿದು ಗೊತ್ತೇ?**)<br>**ಪ್ರಶ್ನೆ:** “ಒಂದು ವೇಳೆ ಸಂಪನ್ಮೂಲಗಳೇ ಕಣ್ಮರೆ ಆದರೆ ಮಾನವನ ಜೀವನ ಹೇಗೆ? “ ಈ ಕುರಿತು ಚರ್ಚಿಸಿ **ಪರಿಸರ ಸಮತೋಲನ**ದ ಅವಶ್ಯಕತೆಯನ್ನು |

| | | | | |
|---|---|---|---|---|
| | | | 4.9) ಆಟ : "ಇದು ನಿನ್ನ ಸರದಿ"<br><br>4.10) ನಾಟಕ / ಕಿರುಚಿತ್ರ ಪ್ರದರ್ಶನ<br>4.11) ನನ್ನ ಶಾಲೆ-ನನ್ನ ಕೊಡುಗೆ | ಅರ್ಥೈಸಿ.<br>4.8) ಕಾಡುಗಳಿಂದ ನಮಗಾಗುವ ಉಪಯೋಗ ಮತ್ತು ಅರಣ್ಯ ಸಂರಕ್ಷಣೆಯ ಅವಶ್ಯಕತೆ ಕುರಿತು ಯೋಜನಾ ಕಾರ್ಯ ನೀಡಿ.<br>4.9) ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ , ಒಬ್ಬೊಬ್ಬರು ಒಂದೊಂದು ಸಂಪನ್ಮೂಲದ ಹೆಸರು ಆಯ್ಕೆ ಮಾಡಿಕೊಂಡು - ಅದರ ಒಂದು ಉಪಯೋಗ ಹೇಳುವಂತೆ ಸೂಚನೆ ಕೊಡಿ.<br>4.10) ಸ್ವಚ್ಛ ಭಾರತ / ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಕುರಿತಾದ ನಾಟಕ ಮಾಡಿಸಿ / ಕಿರುಚಿತ್ರ ಪ್ರದರ್ಶಿಸಿ.<br>4.11) ಹಸಿ ಕಸ,ಒಣ ಕಸ, ವಿಷಕಾರಿ ಕಸ, ಮಲಿನ ಕಸ ಎಂದು ಶಾಲಾ ಆವರಣದಲ್ಲಿ ಮಕ್ಕಳಿಂದ ತ್ಯಾಜ್ಯ ವಿಂಗಡಿಸಿ, ಅವುಗಳನ್ನು ವಿಲೇವಾರಿ ಮಾಡಲು ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಕಸದ ಬುಟ್ಟಿಗಳನ್ನು ತಂದು / ಶಾಲೆಯ ಸೂಕ್ತ ಸ್ಥಳದಲ್ಲಿ ಇರಿಸುವ ವ್ಯವಸ್ಥೆ ಮಾಡಿ.<br><br>**ಒಟ್ಟು ಅವಧಿಗಳು - 03** |
| 05 | ರಾಷ್ಟ್ರೀಯ ಚಿಹ್ನೆಗಳ / ರಾಷ್ಟ್ರ ಗೀತೆಯ ಮಹತ್ವ | • ಭಾರತದ ರಾಷ್ಟ್ರ ಲಾಂಛನ, | 5.1) ಚಿತ್ರಕಲಾ ಸ್ಪರ್ಧೆ /ರಂಗೋಲಿ ಸ್ಪರ್ಧೆ | 5.1) ರಾಷ್ಟ್ರೀಯ ಚಿಹ್ನೆ/ ಸಂಕೇತಗಳ ಚಿತ್ರಕಲೆ ,ರಂಗೋಲಿ ಬರೆಯುವ ಸ್ಪರ್ಧೆ ಏರ್ಪಡಿಸಿ. |

| | | | | |
|---|---|---|---|---|
| | ಅರಿಯುವರು.<br>ರಾಷ್ಟ್ರೀಯ ಬಾವುಟ, ಲಾಂಛನ, ರಾಷ್ಟ್ರೀಯ ಹಬ್ಬಗಳನ್ನು ಗುರುತಿಸುತ್ತಾರೆ.<br><br>❖ ವೈವಿಧ್ಯತೆಯಲ್ಲಿ ಏಕತೆ ಮತ್ತು ಭಾವೈಕ್ಯತೆಯ ಅರ್ಥ ಗ್ರಹಿಸುವರು. | ರಾಷ್ಟ್ರಗೀತೆ, ತ್ರಿವರ್ಣ ಧ್ವಜ, ರಾಷ್ಟ್ರೀಯ ಸಂಕೇತಗಳು, ರಾಷ್ಟ್ರಪ್ರಾಣಿ, ಪಕ್ಷಿ ಇತ್ಯಾದಿ ಪರಿಚಯ.<br>• ರಾಷ್ಟ್ರೀಯ ಹಬ್ಬಗಳ ಆಚರಣೆಯ ವಿಶೇಷತೆ.<br>• ನಮ್ಮ ಭಾರತದ ಪ್ರಾದೇಶಿಕ ಸಾಂಸ್ಕೃತಿಕ ವೈವಿಧ್ಯತೆಗಳ ಪರಿಚಯ.<br>ವಿವಿಧತೆಯಲ್ಲಿ ಏಕತೆ ಶಾಂತಿ ಸಹಬಾಳ್ವೆಯ ಅಗತ್ಯತೆ. | ➢ ವಿಡಿಯೋ ತರಗತಿ ಲಿಂಕ್<br><br>5.2) ಆಶುಭಾಷಣ<br>5.3) ಆಡಿಯೋ ಕ್ಲಿಪಿಂಗ್ ಬಳಕೆ<br><br>5.4) ಆಟ :<br>**"ಮೌಲ್ಯ ಬಂಡಿ"**<br>5.5) ನೃತ್ಯ<br><br>5.6) ವಿಡಿಯೋ ಪ್ರದರ್ಶನ<br>5.7) ಆಡಿಯೋ ಕ್ಲಿಪ್<br>5.8) ಕಿರುನಾಟಕ / ಸ್ಕಿಟ್ | https://youtu.be/R8OzRSkCu0k<br>https://youtu.be/nBl_ouggvDY<br>  <br>5.2) ರಾಷ್ಟ್ರೀಯ ಹಬ್ಬಗಳು / ದಿನಾಚರಣೆಗಳ ಕುರಿತು ಆಶುಭಾಷಣ ಏರ್ಪಡಿಸಿ.<br><br>5.3) ಸಂಪೂರ್ಣ "ಜನಗಣಮನ" ಗೀತೆಯನ್ನು ಆಡಿಯೋ ಮೂಲಕ ಮಕ್ಕಳಿಗೆ ಕೇಳಿಸಿ.<br>5.4) ಸಾಧ್ಯವಾದಲ್ಲಿ 24 ಮಕ್ಕಳನ್ನು ಬಳಸಿಕೊಂಡು ಅಶೋಕ ಚಕ್ರದ ಪ್ರತಿಯೊಂದು ಗೆರೆಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ನಾಮಫಲಕ ಬರೆದು ನೀಡಿ ಮಕ್ಕಳೇ ಚಕ್ರದಂತೆ ತಿರುಗುತ್ತಾ ಒಬ್ಬೊಬ್ಬರಾಗಿ ಪರಿಚಯಿಸಲು ಸೂಚಿಸಿ.<br>5.5 & 5.6) ಭಾರತದ ಸಾಂಸ್ಕೃತಿಕ ವೈವಿಧ್ಯತೆ ಬಿಂಬಿಸುವ ನೃತ್ಯ ಮಾಡಿಸಿ/ ವಿಡಿಯೋ ತೋರಿಸಿ. https://youtu.be/4rs7dG-0WcE<br>5.8) 'ವಿವಿಧತೆಯಲ್ಲಿ ಏಕತೆ' ಮಹತ್ವ ಸಾರುವ ಕಿರು ನಾಟಕ ಮಾಡಿಸಿ.<br>**ಒಟ್ಟು ಅವಧಿಗಳು – 02** |

| | | | | |
|---|---|---|---|---|
| 06 | ಭಾರತದ ಪ್ರಾಕೃತಿಕ ವಿಭಾಗಗಳ ಪರಿಚಯ ಹೊಂದುವರು.<br><br>❖ ಜನಜೀವನದ ಮೇಲೆ ಪ್ರಾಕೃತಿಕ ಪರಿಸರದ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಗ್ರಹಿಸುವರು. | • ಭಾರತದ ಪ್ರಾಕೃತಿಕ ವಿಭಾಗಗಳಾದ ಹಿಮಾಲಯ ಪರ್ವತ, ನದಿ ಬಯಲು, ಪ್ರಸ್ಥಭೂಮಿ, ಕರಾವಳಿ, ಮರುಭೂಮಿ.<br>• ಭಾರತ ಪರ್ಯಾಯ ದ್ವೀಪ.<br>• ಭಾರತದ ಪ್ರಾಕೃತಿಕ ವೈವಿಧ್ಯತೆ ಮತ್ತು ಜನಜೀವನದ ಮೇಲೆ ಬೀರುವ ಪ್ರಭಾವ. | 6.1) ಮಾದರಿ ತಯಾರಿ<br>6.2) ಜಿಯೋ ಮ್ಯಾಪ್ / ಗೂಗಲ್ ಅರ್ಥ್ ಬಳಕೆ<br>6.3) ಕಲಿಕಾ ನಿಲ್ದಾಣ<br>6.4) ರಸಪ್ರಶ್ನೆ | 6.1) ಟೋಪೋಗ್ರಫಿ ತಯಾರಿಸಲು ಅನುಕೂಲಿಸುವ ಮೂಲಕ ಭಾರತದ ಪ್ರಾಕೃತಿಕ ವಿಭಾಗಗಳ ಪರಿಚಯ ಮಾಡಿಸಿ.<br>6.2) **"ಜಿಯೋ ಮ್ಯಾಪ್" / ಗೂಗಲ್ ಅರ್ಥ್** ಬಳಕೆಯ ಮೂಲಕ ಭಾರತದ ದಟ್ಟ ಅರಣ್ಯ,ಗಿರ್ ಅರಣ್ಯ,ಅಸ್ಸಾಂ ಕಾಡು,ಹಿಮಾಲಯದ ಸಸ್ಯವರ್ಗ, ಪಶ್ಚಿಮ ಘಟ್ಟ ಮೊದಲಾದವನ್ನು ತೋರಿಸಿ ಭಾರತದ ಪ್ರಾಕೃತಿಕ ಸೌಂದರ್ಯವನ್ನು ಅನಾವರಣಗೊಳಿಸಿ.<br>6.3) ಭಾರತದ ಪ್ರಾಕೃತಿಕ ವಿಭಾಗಗಳು ಅಲ್ಲಿನ ಜನ ಜೀವನದ ಮೇಲೆ ಹೇಗೆ ಪ್ರಭಾವ ಬೀರಿವೆ ? ಮುಂತಾದ ಪ್ರಮುಖ ವಿಷಯಗಳನ್ನು ಒಳಗೊಂಡ ಮಾಹಿತಿಯನ್ನು 4 ಕಲಿಕಾ ನಿಲ್ದಾಣಗಳಲ್ಲಿಡಿ. (4 ಪ್ರಾಕೃತಿಕ ವಿಭಾಗಗಳ ಪರಿಚಯ ಮಾಡಿಸುವಂತಿರಲಿ ). ಮಕ್ಕಳು ಓದಿ ತಿಳಿದು / ಮಾಹಿತಿ ಕಲೆ ಹಾಕಿಕೊಂಡು ಬಂದು ವಿಷಯ ವಿನಿಮಯ ಮಾಡಿಕೊಳ್ಳಲು ಮಾರ್ಗದರ್ಶನ ಮಾಡಿ.<br>6.4) ಭಾರತದ ಪ್ರಾಕೃತಿಕ ವಿಭಾಗಗಳಿಗೆ ಸಂಬಂಧಿಸಿದಂತೆ ಪ್ರಶ್ನಾವಳಿ ರಚಿಸಿ ರಸಪ್ರಶ್ನೆ ನಡೆಸಿ. **ಒಟ್ಟು ಅವಧಿಗಳು – 03** |
| | | | | |

| ಹೆಚ್ಚುವರಿ ಕಲಿಕಾ ಫಲಗಳು (ಇಲ್ಲಿ ಎರಡು ಮೂಲಬೂತ ಕಲಿಕಾ ಫಲಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಒಂದು ವೇಳೆ ಇಲ್ಲಿ ನೀಡಿರುವ ಕಲಿಕಾ ಫಲಗಳು ಬಾರದಿದ್ದಲ್ಲಿ ಈ ಕೆಳಗೆ ನೀಡಿರುವ ಕಲಿಕಾ ಫಲಗಳನ್ನು ಬಳಸಿಕೊಳ್ಳಬಹುದು) | | | | |
|---|---|---|---|---|
| 01 | • ಪ್ರಪಂಚದಲ್ಲಿ ಭಾರತದ ಭೌಗೋಳಿಕ ಸ್ಥಾನ, ನೆರೆಯ ದೇಶಗಳು, ಸುತ್ತುವರಿದ ಜಲರಾಶಿ, ಆಡಳಿತ ವಿಭಾಗಗಳು, ದ್ವೀಪ ಸಮೂಹಗಳ ಬಗ್ಗೆ ತಿಳಿಯುವರು.<br>• ನಮ್ಮ ರಾಜ್ಯ ಅಥವಾ ಜಿಲ್ಲೆಯ ಸಂಕ್ಷಿಪ್ತ ಪರಿಚಯ ಹೊಂದುವರು. | • ಭಾರತದ ಭೌಗೋಳಿಕ ಸ್ಥಾನ, ನೆರೆಯ ದೇಶಗಳು, ಭಾರತವನ್ನು ಆವರಿಸಿದ ಜಲರಾಶಿಗಳು.<br>• ಭಾರತದ ರಾಜ್ಯ-ಕೇಂದ್ರಾಡಳಿತ ಪ್ರದೇಶಗಳು.<br>• ನಮ್ಮ ರಾಜ್ಯ ಕರ್ನಾಟಕ- ನೆರೆಯ ರಾಜ್ಯಗಳ ಪರಿಚಯ.<br>• ನಮ್ಮ ಜಿಲ್ಲೆ ಮತ್ತು ನೆರೆಯ ಜಿಲ್ಲೆಗಳು. | 1.1) ನಕಾಶೆ ಓದುವುದು<br>1.2) ಹೂವು-ನಕ್ಷೆ ಆಟ<br>1.3) ಕಲಿಕಾ ನಿಲ್ದಾಣ | 1.1) ಪ್ರಪಂಚ ರಾಜಕೀಯ ಭೂಪಟ ನೀಡಿ ಭಾರತವನ್ನು ಗುರುತಿಸಿ ಅದರ ಸ್ಥಾನ ತಿಳಿಯಲು ಸಹಕರಿಸಿ.<br>❖ ಭಾರತದ ರಾಜಕೀಯ ಭೂಪಟವನ್ನು ನೀಡಿ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಸುತ್ತುವರಿದ ಜಲರಾಶಿಗಳ ಪರಿಚಯ ಮಾಡಿಸಿ.<br>❖ ಕರ್ನಾಟಕದ ಭೂಪಟದ ಸಹಾಯದೊಂದಿಗೆ ಜಿಲ್ಲೆಗಳು, ನಮ್ಮ ನೆರೆಯ ಜಿಲ್ಲೆಗಳ ಸಂಕ್ಷಿಪ್ತ ಪರಿಚಯ ಮಾಡಿಸಿ.<br>1.2) ಭಾರತದ ನಕ್ಷೆಯನ್ನು ಶಾಲಾ ಮೈದಾನದಲ್ಲಿ ಬಿಡಿಸಿ,ರಾಜ್ಯಗಳನ್ನು ಗುರುತಿಸಿ. ಪ್ರತಿ ವಿದ್ಯಾರ್ಥಿಗೆ ಒಂದೊಂದು ರಾಜ್ಯದ ಹೆಸರನ್ನು ಹೇಳಿ. ವಿದ್ಯಾರ್ಥಿಯು ಒಂದು ಹೂವನ್ನು ತೆಗೆದುಕೊಂಡು ಹೋಗಿ ಆಯಾಯ ರಾಜ್ಯದ ಮೇಲೆ ಇಡುವಂತೆ ಸೂಚನೆ ಕೊಡಿ.<br>1.3) ನಮ್ಮ ರಾಜ್ಯದ ಜಿಲ್ಲೆಗಳು, ನೆರೆಯ ರಾಜ್ಯಗಳು ಮತ್ತಿತರ ಅಂಶಗಳನ್ನು ಪಟ್ಟಿ ಮಾಡಿ ಕಲಿಕಾ ನಿಲ್ದಾಣಗಳಲ್ಲಿರಿಸಿ ಮಾಹಿತಿ ತಿಳಿಯಲು ಅನುಕೂಲಿಸಿ. **ಒಟ್ಟು ಅವಧಿಗಳು - 04** |
| 2 | ಸೌರವ್ಯೂಹದ ಪರಿಚಯ ಹೊಂದುವರು. | • ಸೂರ್ಯ ಮತ್ತು ಅದರ ಪರಿವಾರ. ಭೂಮಿಯ ಸ್ಥಾನ, ಗಾತ್ರ, ಆಕಾರ. | 2.1) ಚಟುವಟಿಕೆ: **"ಬಾ ನೋಡೋಣ ಆಕಾಶ"**<br>2.2) ಚಟುವಟಿಕೆ: **ನಾವು ಗ್ರಹಗಳಾದಾಗ** | 2.1) ಛತ್ರಿಯ ಒಳಭಾಗದಲ್ಲಿ ಸೂರ್ಯ, ನಕ್ಷತ್ರಗಳ ರೇಡಿಯಂ ಸ್ಟಿಕ್ಕರ್ ಅಂಟಿಸಿ ಛತ್ರಿಯನ್ನು ತಿರುಗಿಸುತ್ತಾ ಮಕ್ಕಳಿಗೆ ಕೆಳಗಿನಿಂದ ವೀಕ್ಷಿಸಲು ತಿಳಿಸಿ. ಆಕಾಶ ಕಾಯ, ಹಗಲು-ರಾತ್ರಿ ಇವುಗಳೆಲ್ಲಾ ಹೇಗೆ ಸಾಧ್ಯ ಎಂಬುದನ್ನು ಚರ್ಚಿಸಿ. |

| | | | | |
|---|---|---|---|---|
| | ❖ ಭೂಮಿ ಇತರೆ ಗ್ರಹಗಳಿಗಿಂತ ಹೇಗೆ ವಿಶಿಷ್ಟವಾಗಿದೆ ಎಂಬುದನ್ನು ಅರಿಯುವರು. | • ಭೂಮಿಯು ಇತರೆ ಗ್ರಹಗಳಿಂದ ವಿಭಿನ್ನ - ಭೂಮಿಯ ವಿಶಿಷ್ಟತೆ. | 2.3) ಚಟುವಟಿಕೆ: **" ತಿಳಿಯೋಣ ನಮ್ಮ ಭೂಮಿಯ ಗಾತ್ರ-ಆಕಾರ "** | 2.2) ಇಬ್ಬರು ಮಕ್ಕಳನ್ನು ಕರೆದು ಒಬ್ಬಳನ್ನು ಮಧ್ಯದಲ್ಲಿ ಸೂರ್ಯನಂತೆ ಕೂರಿಸಿ, ಇನ್ನೊಬ್ಬನಿಗೆ ತನ್ನನ್ನು ತಾನು ಸುತ್ತುತ್ತಾ ಸೂರ್ಯನನ್ನು ಸುತ್ತಲು ಹೇಳಿ. ಹೀಗೆ ಗ್ರಹಗಳು ಸೂರ್ಯನನ್ನು ಸುತ್ತುತ್ತವೆ ಮತ್ತು ಹಗಲು ರಾತ್ರಿ ಹೇಗೆ ಆಗುತ್ತದೆ ಎಂಬುದನ್ನು ಅರ್ಥೈಸಿ ( 5ನೇ ತರಗತಿ ಪರಿಸರ ಅಧ್ಯಯನ ಪಾಠ14 ಪುಟ ಸಂಖ್ಯೆ-185)<br>**2.3) ಸೂಚನೆಗಳು : (ಭೂಮಿಯ ಆಕಾರ ತಿಳಿಯಲು)**<br>1- ಗ್ಲೋಬ್ ನ ಮೇಲೆ ಕಾಗದದ ಚಿಕ್ಕ ದೋಣಿಗಳನ್ನು ಒಂದೇ ಸಾಲಿನಲ್ಲಿ ಅಂಟಿಸಿ. (ದೋಣಿಗಳಿಗೆ ಚಿಕ್ಕ ಧ್ವಜ ಅಂಟಿಸಿರಬೇಕು)<br>2-ಸಮತಟ್ಟಾದ ಕಾಗದದ ಮೇಲೆಯೂ ಚಿಕ್ಕ ದೋಣಿಗಳನ್ನು ಒಂದೇ ಸಾಲಿನಲ್ಲಿ ಅಂಟಿಸಿ.<br>3-ಎರಡನ್ನೂ ಒಂದು ಬದಿಯಿಂದ ಗಮನಿಸಲು ತಿಳಿಸಿ. ಗ್ಲೋಬನ್ನು ನಿಧಾನವಾಗಿ ತಿರುಗಿಸುತ್ತಾ ಗಮನಿಸುವಂತೆ ಸೂಚನೆ ಕೊಡಿ.<br>4-ಕಾಗದದ ಮೇಲಿನ ಎಲ್ಲಾ ದೋಣಿಗಳು ಒಂದೇ ಬಾರಿ ಕಾಣುವುವು. ಗ್ಲೋಬನ್ನು ನಿಧಾನ ತಿರುಗಿಸುತ್ತಾ ನೋಡಿದಾಗ ದೋಣಿಗಳು ಒಂದೊಂದಾಗಿ ಬರುತ್ತಿರುವುದನ್ನು ಗಮನಿಸಲು ಸೂಚಿಸಿ.<br>➢ ಭೂಮಿಯು 'ಜಿಯಾಡ್' ಆಕಾರದಲ್ಲಿ ಇರುವುದರಿಂದ ಎಲ್ಲಾ ದೋಣಿಗಳು ಒಮ್ಮೆಗೆ ಕಾಣಿಸದೇ ಒಂದರ ಹಿಂದೆ ಮತ್ತೊಂದರಂತೆ ಬರುವುದನ್ನು ಗಮನಿಸಲು ಸೂಚಿಸಿ.<br>ಇದರ ಮೂಲಕ ಭೂಮಿಯು ಚಪ್ಪಟೆಯಾಗಿಲ್ಲ ಬದಲಾಗಿ ಜಿಯಾಡ್ |

| | | | | |
|---|---|---|---|---|
| | | | | ಆಕಾರದಲ್ಲಿದೆ ಎಂಬುದನ್ನು ಅರ್ಥೈಸಿ.<br>2.4) **ಚಟುವಟಿಕೆ : (ಭೂಮಿಯ ಗಾತ್ರ)** ಸೂಚನೆಗಳು:<br>1-ವಿವಿಧ ಗಾತ್ರದ 4 ಚೆಂಡುಗಳನ್ನು ತೆಗೆದುಕೊಂಡು ಅದರ ಸುತ್ತಲು ದಪ್ಪ ಟೇಪ್ ಸುತ್ತಿರಿ.<br>2-ಟೇಪ್ ಸುತ್ತಿದ ಭಾಗದ ಸುತ್ತಳತೆಯನ್ನು ಹಿಡಿದು ಕಾಗದದ ಮೇಲೆ ಗೆರೆ ಬರೆಯಿರಿ.<br>3-ಎಲ್ಲಾ ಚೆಂಡುಗಳ ಸುತ್ತಳತೆ ಬರೆಯುತ್ತಾ ಹೋದಂತೆ ಗೆರೆಗಳು ನೇರವಾಗುವುದನ್ನು ಗಮನಿಸಲು ಸೂಚಿಸಿ.<br>ಇದರಿಂದ ಭೂಮಿಯು ಬಹಳ ದೊಡ್ಡ ಗಾತ್ರದಲ್ಲಿರುವುದರಿಂದ ನಮಗೆ ಅದರ ನೈಜ ಆಕಾರ ಗೋಚರಿಸದೇ ಎಲ್ಲೆಡೆ ಸಮತಟ್ಟಾಗಿರುವಂತೆ ಕಾಣುವುದೆಂದು ಅರ್ಥೈಸಿ. **ಒಟ್ಟು ಅವಧಿಗಳು -04** |

## ಪೂರ್ವ / ಸಾಫಲ್ಯ ಪರೀಕ್ಷೆಗೆ ಬಳಸಿಕೊಳ್ಳಬಹುದಾದ ಪ್ರಶ್ನೆಗಳು

**ತರಗತಿ : 6** **ವಿಷಯ : ಸಮಾಜ ವಿಜ್ಞಾನ**

**I . ಬಿಟ್ಟ ಸ್ಥಳ ತುಂಬಿರಿ.**

1.ಭೂಮಿಯು------------------------ಆಕಾರದಲ್ಲಿದೆ.

2.ನಮ್ಮ ರಾಷ್ಟ್ರ ಲಾಂಛನ ------------------------------ಆಗಿದೆ.

3.ಬೆಂಗಳೂರು-------------------------------- ರಾಜ್ಯದ ರಾಜಧಾನಿಯಾಗಿದೆ.

**II . ಈ ಕೆಳಗಿನ ಹೇಳಿಕೆಗಳು ಸರಿಯೋ/ತಪ್ಪೋ ತಿಳಿಸಿ.**

4.ಪ್ರಾಕೃತಿಕ ಪರಿಸರದ ಅಂಶಗಳು ಅಲ್ಲಿನ ಜನಜೀವನದ ಮೇಲೆ ಪ್ರಭಾವ ಬೀರುತ್ತವೆ. ( )

5.ಎರಡಕ್ಕಿಂತ ಹೆಚ್ಚು ತಲೆಮಾರಿನವರು ಕೂಡಿ ವಾಸಿಸುವ ದೊಡ್ಡ ಕುಟುಂಬ ವಿಭಕ್ತ ಕುಟುಂಬವಾಗಿದೆ. ( )

6.ಮಾನವರು ತನ್ನ ಬುದ್ಧಿಶಕ್ತಿ, ಯೋಚನಾಲಹರಿ, ಸಂಸ್ಕೃತಿಯಿಂದ ಬೇರೆ ಪ್ರಾಣಿಗಳಿಗಿಂತ ಭಿನ್ನ ಎನಿಸಿದ್ದಾರೆ. ( )

**III . ಮೊದಲ ಜೋಡಿ ಪದಗಳ ಸಂಬಂಧ ಗ್ರಹಿಸಿ ಎರಡನೇ ಜೋಡಿ ಪದಗಳನ್ನು ಪೂರ್ಣಗೊಳಿಸಿ.**

7 . ಜನವರಿ 26 : ಗಣರಾಜ್ಯೋತ್ಸವ :: ಆಗಸ್ಟ್ 15 :____________________

8. ಅತ್ಯಂತ ದೊಡ್ಡ ಗ್ರಹ : ಗುರು :: ಚಿಕ್ಕ ಗ್ರಹ : ________________________

**IV . ಒಂದು ವಾಕ್ಯದಲ್ಲಿ ಉತ್ತರಿಸಿ.**

9.ನಿಮ್ಮ ಊರಿನಲ್ಲಿ ಆಚರಿಸುವ ನಾಲ್ಕು ಹಬ್ಬಗಳ ಹೆಸರನ್ನು ಬರೆ.

---

**V . ಅ ಪಟ್ಟಿಯಲ್ಲಿರುವ ಅಂಶಗಳನ್ನು ಬ ಪಟ್ಟಿಯಲ್ಲಿನ ಅಂಶಗಳೊಂದಿಗೆ ಹೊಂದಿಸಿ ಬರೆಯಿರಿ.**

| 'ಅ' | | 'ಬ' | |
|---|---|---|---|
| 1. ಬಡಗಿ | - | ಮಡಿಕೆ ಮಾಡುವವರು | ________________ |
| 2. ಕುಂಬಾರ | - | ಆಭರಣ ತಯಾರಿಸುವವರು | ________________ |
| 3. ದರ್ಜಿ | - | ಮರದ ಕೆಲಸ ಮಾಡುವವರು | ________________ |
| 4. ಅಕ್ಕಸಾಲಿಗ | - | ಬಟ್ಟೆ ಹೊಲಿಯುವವರು | ________________ |

**VI.ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

11. ರಾಷ್ಟ್ರ ಧ್ವಜದ ಚಿತ್ರ ಬಿಡಿಸಿ, ಸೂಕ್ತ ಬಣ್ಣಗಳನ್ನು ತುಂಬಿ ಅವು ಏನನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಬರೆ.

12. ಈ ಕೆಳಗಿನವುಗಳನ್ನು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳಾಗಿ ವರ್ಗೀಕರಿಸಿ.

ನೀರು, ಸೂರ್ಯನ ಬೆಳಕು,ಕಲ್ಲಿದ್ದಲು, ಗಾಳಿ, ಮಣ್ಣು, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಆಕ್ಸಿಜನ್, ಕಾಡು, ಚಿನ್ನ, ವನ್ಯಜೀವಿಗಳು, ಕಬ್ಬಿಣ.

| ನವೀಕರಿಸಬಹುದಾದ ಸಂಪನ್ಮೂಲಗಳು | ನವೀಕರಿಸಲಾಗದ ಸಂಪನ್ಮೂಲಗಳು |
|---|---|
| | |

**VII . ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.**

13.ತಮ್ಮ ವಿಶಿಷ್ಟ ಗುಣ ಮತ್ತು ಕೌಶಲಗಳಿಂದ ವಿವಿಧ ಕ್ಷೇತ್ರಗಳಲ್ಲಿ( ಕವಿಗಳು, ಕಲಾಕಾರರು, ವಿಜ್ಞಾನಿಗಳು,ಗಾಯಕರು, ಸಮಾಜ ಸುಧಾರಕರು) ಪ್ರಸಿದ್ಧರಾದ ಯಾರಾದರೂ ಒಬ್ಬ ಪ್ರಸಿದ್ಧ ವ್ಯಕ್ತಿಯ ಕುರಿತು ನಾಲ್ಕು ಸಾಲುಗಳಲ್ಲಿ ಬರೆಯಿರಿ.

**VIII . ಕೊಟ್ಟಿರುವ ಭಾರತದ ಭೂಪಟದಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.**

14.ಕರ್ನಾಟಕ , ಶ್ರೀಲಂಕಾ , ಅರಬ್ಬಿ ಸಮುದ್ರ , ಬಂಗಾಳ ಕೊಲ್ಲಿ , ಹಿಮಾಲಯ ಪರ್ವತ ಶ್ರೇಣಿ , ಥಾರ್ ಮರುಭೂಮಿ.

